**ಓ .ಎಸ್ . ನಂ. 24/2012** **ಪಿಡಬ್ಲ್ಯೂ: 1**

**ದಿನಾಂಕ 21.01.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ- ಶ್ರೀ ಎಂ.ಆರ್.ಕೆ. ಪ್ರತಿವಾದಿಗಳ ಪರ ವಕೀಲರಿಂದಃ**

ನಿಪಿ-11 ದಾವಾ ಸಲ್ಲಿಸುವ ಸಮಯದಲ್ಲಿ ನನ್ನ ಬಳಿ ಇತ್ತು. ನಿಪಿ-11 ರಲ್ಲಿ ಬರೆದಿರುವ ಸಂಗತಿಗಳು ನನಗೆ ತಿಳಿದಿರುತ್ತದೆ. ಸರ್ವೆ ನಂಬರ್ 552 ರಲ್ಲಿ ಒಟ್ಟಾರೆ 2 ಎಕರೆ 82 ಸೆಂಟ್ ಇರುತ್ತದೆ. ನಿಪಿ-11 ರ ಕ್ರಯಪತ್ರದ ಚೆಕ್ಕುಬಂಧಿ ಪೂರ್ವಕ್ಕೆ ಕೆಂಚಮ್ಮರವರ ಜಮೀನು, ಪಶ್ಚಿಮಕ್ಕೆ ಮುದುಶೆಟ್ಟಿರವರ ಜಮೀನು, ದಕ್ಷಿಣಕ್ಕೆ ವೀರಶೆಟ್ಟಿರವರ ಜಮೀನು, ಉತ್ತರಕ್ಕೆ ಚಿಕ್ಕಲಿಂಗೇಗೌಡರ ಜಮೀನು ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ಪೂರ್ವ, ಪಶ್ಚಿಮ, ದಕ್ಷಿಣ ಸರಿ ಇರುತ್ತದೆ ಉತ್ತರಕ್ಕೆ ಈಗ ಚಿಕ್ಕಲಿಂಗೇಗೌಡರ ಜಮೀನು ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-11 ರಲ್ಲಿ ನನ್ನ ಹೆಂಡತಿ ಅಥವಾ ಮಾವನವರ ಹೆಸರನ್ನು ನಮೂದು ಮಾಡಿಲ್ಲ ಎಂದರೆ ಸರಿ. ನಿಪಿ-11 ರಲ್ಲಿರುವಂತೆ ನನ್ನ ದಾವಾ ಪತ್ರದ ಚೆಕ್ಕುಬಂಧಿಯಲ್ಲಿ ನಮೂದಿಸಿಲ್ಲ ಎಂದರೆ ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ನನ್ನ ದಾವಾ ಪತ್ರದಲ್ಲಿರುವ ಅಂಶಗಳನ್ನು ನಾನು ಹೇಳಿ ಬರೆಯಿಸಿರುತ್ತೇನೆ. ನಿಪಿ-11 ರಲ್ಲಿ ದಾವಾ ಇ ಆಸ್ತಿಯನ್ನು ನನ್ನ ಸ್ವಯಾರ್ಜಿತ ಹಣದಿಂದ ಖರೀದಿ ಮಾಡಿರುತ್ತೇನೆ ಎಂದು ನಮೂದಿಸಿಲ್ಲ ಎಂದರೆ ಸರಿಯಲ್ಲ. ದಾವಾ ಇ ಆಸ್ತಿಯನ್ನು ವಿಷಕಂಠನಾಯಕರವರ ಮಕ್ಕಳಿಂದ ಖರೀದಿ ಮಾಡಿರುತ್ತೇನೆ. ನಿಪಿ-11ರ ಕ್ರಯಪತ್ರವನ್ನು ಬರೆದದವರು ಹಾಗೂ ಸಾಕ್ಷಿಗಳು ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-11 ರ ಷರತ್ತುಗಳನ್ನು ನಾವು ಹೇಳಿ ಬರೆಯಿಸಿರುತ್ತೇವೆ.

ದಾವಾ ಇ ಆಸ್ತಿಯು ಯಾವಾಗ ಪೋಡಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಇ ಆಸ್ತಿಯ ಖಾತೆಯು ಯಾವ ವರ್ಷ ನನ್ನ ಹೆಸರಿಗೆ ದಾಖಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಇ ಆಸ್ತಿ ನನ್ನ ಸ್ವಯಾರ್ಜಿತ ಆಸ್ತಿ ಆಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ